ಸುಖವಾದ ನಿದ್ದೆಗೆ ಜಾರಿಬಿಡಿ. ಮರುದಿನ ಎದ್ದು ಯಲ್ಲಾಪುರದಲ್ಲಿಯೇ ಬೆಳಗಿನ ತಿಂಡಿ ಮುಗಿಸಿ ಮತ್ತೆ ಕಾಡ ಮಡಿಲಿಗೆ ದಾಂಗುಡಿಯಿಡಲು ಸಿದ್ಧರಾಗಿ. ಇಂದು ಮೊದಲು ನೋಡಬೇಕಾಗಿದ್ದು ಕಾನೂರು ಜಲಪಾತ.

### ಕಾನನದ ನಡುವೆ ಕಾನೂರು ಜೋಗ

ಆಚೀಚೆ ಬೆಟ್ಟದ ನಡುವೆ ಅಗಲವಾದ ಹಳ್ಳ, ಹಳ್ಳದ ದಾರಿಯಲ್ಲಿ ದೊಡ್ಡದೊಡ್ಡ ಕಲ್ಲುಗಳನ್ನು ಹತ್ತಿಳಿಯುತ್ತ ಸಾಗಿದರೆ ಪಶ್ಚಿಮ ಘಟ್ಟದ ಬೆಟ್ಟಗಳ ಸರಣಿ ಥಟ್ಟನೆ ಕೊನೆಗೊಳ್ಳುತ್ತದೆ. ಆ ಪ್ರಪಾತದಲ್ಲಿ ಅಚ್ಚರಿಯಂತೆ ಹುಟ್ಟಿಕೊಳ್ಳುವ ಜಲಪಾತ, ಹೆಸರು ಕಾನೂರು ಜೋಗ.

ಕಾನೂರು ಜಲಪಾತಕ್ಕೆ ಯಲ್ಲಾಪುರದಿಂದ ಕೈಗಾ ಮಾರ್ಗವಾಗಿ ದೂರ ಸಾಗಿದರೆ ಬಾಸಲ್. ಮುಂದೆ ಸ್ವಲ್ಪ ದೂರದಲ್ಲಿ ಬಲಕ್ಕೆ ಕಾನೂರಿಗೆ ಹೋಗುವ ಅಡ್ಡರಸ್ತೆ. ಅಲ್ಲಿಂದ ಮುಂದೆ ಉಬ್ಬು ಹೊಂಡಗಳಿರುವ ಕಚ್ಚಾರಸ್ತೆಯಲ್ಲಿ ತೆರಳಿದರೆ ರಸ್ತೆ ಅಂತ್ಯವಾಗುತ್ತದೆ. ಅಲ್ಲೇ ವಾಹನವಿಟ್ಟು ಅಲ್ಲಿಂದ ಮುಂದೆ ಕಾಲ್ದಾರಿಯಲ್ಲಿ ಹೋಗುತ್ತಿದ್ದಂತೆ ಸಿಗುವ ಹಳ್ಳವೇ ಮುಂದೆ ಪ್ರಪಾತಕ್ಕೆ ಜಿಗಿಯುತ್ತದೆ. ಹರಿಯುವ ಹಳ್ಳದಲ್ಲಿ ಕಲ್ಬಂಡೆಯ ತೀರ ಅಂಚಿಗೆ ನಿಂತು ಕಣ್ ಚೂಪು ಮಾಡಿ ನೋಡಿದರೆ ಮಾತ್ರ ಜಲಪಾತ ನೆಲ ಮುಟ್ಟುವುದು ಕಾಣುತ್ತದೆ. ಮಳೆಗಾಲದಲ್ಲಿ ಇಲ್ಲಿ ತೆರಳಲು ಸಾಧ್ಯವೇ ಇಲ್ಲ.

ಸಮೀಪದಲ್ಲಿ ಯಾವುದೇ ಮನೆಗಳಿಲ್ಲ. ಜನಸಂಚಾರವೂ ಇಲ್ಲ. ಆದ್ದರಿಂದ ಗುಂಪಿನಲ್ಲಿ ಹೋಗುವುದು ಉತ್ತಮ. ಹೆಚ್ಚು ಕೇಕೆ ಗಲಾಟೆಗಳಿಗೆ ಆಸ್ಪದ ಕೊಡಬೇಡಿ. ವನ್ಯಜೀವಿಗಳಿಗೆ ಕಿರಿಕಿರಿಯಾಗಿ ದಾಳಿಯಿಡಬಹುದು. ಅಲ್ಲದೇ ಪ್ಲಾಸ್ಟಿಕ್ ಬಳಕೆ ಮತ್ತು ಮದ್ಯಪಾನ ಇಲ್ಲಿ ನಿಷಿದ್ಧ. ಮಲವಳ್ಳಿ, ಕಳಚೆ ಬಸ್‌ಗಳು ಕಾನೂರು ಕ್ರಾಸಿನವರೆಗೆ ಸಿಗುವುದಾದರೂ ಅವುಗಳನ್ನೇ ನಂಬಿಕೊಳ್ಳುವಂತಿಲ್ಲ. ಸ್ವಂತ ವಾಹನದಲ್ಲೇ ತೆರಳಿ. ಸ್ಥಳೀಯರ ಸಂಪರ್ಕ ಮಾಡಿಕೊಂಡು ಕಾನೂರು ಜಲಪಾತಕ್ಕೆ ತೆರಳುವುದು ಒಳ್ಳೆಯದು. (ಸಂಪರ್ಕ: ರವಿ ಪೂಜಾರಿ 8277531147)

ಕಾನೂರು ಜಲಪಾತ ನೋಡಿ ತಿರುಗಿ ಬರುವಾಗ ನಿಮ್ಮ ರಸ್ತೆ ರಾಷ್ಟ್ರೀಯ ಹೆದ್ದಾರಿ ಸೇರುವ ಜಾಗದ ಹೆಸರು ಚಿನ್ನಾಪುರ. ಇಲ್ಲಿ ಎಡಕ್ಕೆ ತಿರುಗಿಕೊಂಡರೆ ಬಂದ ಹಾದಿಯಲ್ಲಿಯೇ ಯಲ್ಲಾಪುರಕ್ಕೆ ಸಾಗುತ್ತೀರಿ. ಬದಲಿಗೆ ಬಲಕ್ಕೆ ಹೊರಳಿಕೊಳ್ಳಿ. ಅಲ್ಲಿ ಇನ್ನೊಂದು ಸ್ನಿಗ್ಧ ಸೌಂದರ್ಯದ ನೀರಝರಿ ನಿಮಗಾಗಿ ಕಾಯುತ್ತಿದೆ.

### ಶಿರ್ಲೆಯ ಜಲಚೆಲುವೆ

ಇತ್ತೀಚೆಗಷ್ಟೇ ಜನಪ್ರಿಯತೆ ಹೆಚ್ಚಿಸಿಕೊಳ್ಳುತ್ತಿರುವ ಇನ್ನೊಬ್ಬಳು ಜಲಚೆಲುವೆ ಶಿರ್ಲೆ ಜಲಪಾತ. ಯಲ್ಲಾಪುರದಿಂದ ಕಾರವಾರದ ಹಾದಿಯಲ್ಲಿ ಇಡಗುಂದಿ ದಾಟಿದ ತಕ್ಷಣ ಅರಬೈಲ್ ಘಾಟಿ ಆರಂಭವಾಗುತ್ತದೆ. ಅಲ್ಲಿಂದ ಮುಂದೆ ಎರಡು ಕಿ.ಮೀ. ದೂರದಲ್ಲಿ ಎಡಕ್ಕೆ ಶಿರ್ಲೆ ಜಲಪಾತಕ್ಕೆ ದಾರಿ ಕವಲೊಡೆಯುತ್ತದೆ. ಯಲ್ಲಾಪುರದಿಂದ ಇಲ್ಲಿಗೆ ಒಟ್ಟು 12 ಕಿ.ಮೀ. ಶಿರ್ಲೆಯ ಚಿಕ್ಕ ಬಸ್ ನಿಲ್ದಾಣದ ಬಳಿ ವಾಹನ ನಿಲ್ಲಿಸಿ ಗ್ರಾಮ ಅರಣ್ಯ ಸಮಿತಿಗೆ ಶುಲ್ಕ ಪಾವತಿಸಿ ಇಳಿಜಾರಿನ ರಸ್ತೆಯಲ್ಲಿ ಸುಮಾರು ನಾಲ್ಕು ಕಿ.ಮೀ. ದೂರ ಸಾಗಬೇಕು. ವಾಹನಗಳನ್ನು ಕೆಳಗೆ ಒಯ್ಯುವ ಹಾಗಿಲ್ಲ. ಸ್ಥಳೀಯರ ಮನೆ ದಾಟಿ ಮುಂದೆ ಅಡಿಕೆ ತೋಟದಲ್ಲಿ ಇಳಿದಂತೆಲ್ಲ ಜಲಪಾತ ಹತ್ತಿರವಾಗುತ್ತದೆ.

ದೊಡ್ಡವೂ ಅಲ್ಲದ ಚಿಕ್ಕದೂ ಅಲ್ಲದ ಶಿರ್ಲೆ ಸಹಜವಾಗಿ ಎಲ್ಲರಿಗೂ ಇಷ್ಟವಾಗುತ್ತದೆ. ಕಣಿವೆಯ ಆಳದಲ್ಲಿ ಹಸಿರಿನ ಮಡಿಲಲ್ಲಿ ನೀರು ಬಿನ್ನಾಣವಾಡುತ್ತದೆ. ಇದೂ ಸಹ ವರ್ಷಾವಧಿ ನೀರಿರುವ ಜಲಪಾತವೇ. ಹಳ್ಳದಲ್ಲಿ ನೀರಾಡಬಹುದು. ಚಿಕ್ಕ ಚಿಕ್ಕ ಸಮತಟ್ಟಿನ ಕಲ್ಲುಗಳನ್ನು ಬೀಸಿ ಎಸೆದು ಕಪ್ಪೆಗಳಂತೆ ಹಾರಿಸಬಹುದು. ಕಪ್ಪೆಗಳ ಪೂರ್ವಾಶ್ರಮವಾದ ಮಂಡೂಕಗಳು ನೀರಗುಂಡಿಗಳಲ್ಲಿ ಅಲ್ಲಲ್ಲಿ ಈಜಾಡುತ್ತವೆ. ಹೆಚ್ಚು ಆಳವಿರದ ಕಡೆ ಹಗೂರ ನೀರಿಗಿಳಿದರೆ ತಂಪೋ ತಂಪು. ಜಲಪಾತದ ಅನತಿ ದೂರದಲ್ಲಿ ಚಿಕ್ಕದೊಂದು ಅಂಗಡಿಯಿದೆ. ವಸತಿಗೆ ಯಲ್ಲಾಪುರಕ್ಕೆ ಬರಬೇಕು.

ಹಾಗೆಯೇ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾರವಾರದ ಕಡೆಗೆ ಹೊರಟರೆ ಹೆಗ್ಗರಣೆಯಲ್ಲಿ ಎಡಕ್ಕೆ ಹೊರಳಿಕೊಂಡು ಯಾಣಕ್ಕೂ ಹೋಗಿಬರಬಹುದು. ಬಿಸಿಲಲ್ಲಿ ಹೊಳೆಯುವ ಯಾಣದ ಕಲ್ಲು ನೋಡಿ ಇಳಿಯುವಾಗ ಅಲ್ಲಿ ವಿಭೂತಿ ಜಲಪಾತವಿದೆ. ಕಾಡ ನಡುವೆ ನೊರೆಯುಕ್ಕಿಸುತ್ತ ಹರಿವ ಈ ಜಲಪಾತದಲ್ಲಿ ಮನದಣಿಯೆ ನೀರಾಟ ಆಡಿ ಯಲ್ಲಾಪುರಕ್ಕೆ ಮರಳಬಹುದು. ■

**ವಸತಿಗೆ ಹೊಟೇಲ್‌ಗಳು**
**ಹೊಟೇಲ್ ಸಂಕಲ್ಪ**: 09448435098
**ಹೊಟೇಲ್ ಇಂದ್ರಪ್ರಸ್ಥ**: 08419 261477

## ಶಿರಸಿಗೂ ಹೋಗಿಬನ್ನಿ

**ಶಿವಗಂಗಾ:** ಶಾಲ್ಮಲಾ ಹೊಳೆಯಗುಂಟವೇ ನೋಡಲೇಬೇಕಾದ ಹಲವು ತಾಣಗಳಿವೆ. ಅದರಲ್ಲಿ ಶಿವಗಂಗಾ ಕೂಡ ಒಂದು. 74 ಮೀಟರ್ ಎತ್ತರದಿಂದ ಉತ್ಸಾಹದಿಂದ ಧುಮುಕುವ ನೀರ್ಬಳ್ಳಿಯಂತೆ ಇದು ಕಾಣುತ್ತದೆ. ಶಿರಸಿಯಿಂದ 22 ಕಿಮೀ ದೂರವಿದೆ. ಗಣೇಶಪಾಲ್‌ನಿಂದ ಹರಿಯುವ ಶಾಲ್ಮಲಾ ಮುಂದೆ ಶಿವಗಂಗೆಯಾಗುತ್ತಾಳೆ. ಗಣೇಶ್ ಪಾಲ್ ಸಮೀಪ ಟ್ರೆಕಿಂಗ್‌ಗೆ ಅವಕಾಶವಿದೆ.

**ಸಹಸ್ರಲಿಂಗ:** ಯಲ್ಲಾಪುರದಿಂದ ಶಿರಸಿ ಪೇಟೆ 50 ಕಿಲೋಮೀಟರ್. ಯಲ್ಲಾಪುರ ಶಿರಸಿ ರಾಜ್ಯ ಹೆದ್ದಾರಿಯಲ್ಲೆ ಹಲವು ಪ್ರವಾಸಿ ತಾಣಗಳಿವೆ. ಸೋಂದಾ ತಿರುವಿನಲ್ಲಿ ಒಳಹೊಕ್ಕರೆ ಸ್ವರ್ಣವಲ್ಲಿ ಮಠ, ವಾದಿರಾಜ ಮಠ ಮತ್ತು ಜೈನ ಮಠಗಳಿವೆ. ಶಾಂತವಾಗಿ ಹರಿಯುತ್ತಿರುವ ಶಾಲ್ಮಲಾ ನದಿಯ ತಟದಲ್ಲಿ ಸೋದೆ ಸಂಸ್ಥಾನದ ರಾಜ ಅರಸಪ್ಪ ನಾಯಕ ನಿರ್ಮಿಸಿದ ಸಹಸ್ರ ಲಿಂಗಗಳಿವೆ.

**ಉಂಚಳ್ಳಿ:** ಶಿರಸಿ ಪೇಟೆಯಿಂದ 35 ಕಿ.ಮೀ. ದೂರದಲ್ಲಿ ಉಂಚಳ್ಳಿ ಜಲಪಾತವಿದೆ. ಅಘನಾಶಿನಿಯ ಸುಂದರ ಸೃಷ್ಟಿಯಾದ ಇದು 116 ಮೀಟರ್ ಎತ್ತರವಿದೆ. ಕಿವಿ ಕಿವುಡಾಗುವಷ್ಟು ಜೋರಾದ ಶಬ್ದ ಮಾಡುತ್ತ ಬೀಳುವುದರಿಂದ 'ಕೆಪ್ಪ ಜೋಗ' ಎಂದೇ ಫೇಮಸ್. ಬೆಳದಿಂಗಳ ರಾತ್ರಿ ಮೂನ್ ಬೋ ಕಾಣುವುದು ಉಂಚಳ್ಳಿಯ ವಿಶೇಷ.

**ಭೀಮನವಾರೆ ಗುಡ್ಡ:** ಅಘನಾಶಿನಿ ನದಿಕಣಿವೆಯ ಭೀಮನವಾರೆ ಗುಡ್ಡವು ವಿಹಂಗಮ ನೋಟಕ್ಕೆ ಹೆಸರುವಾಸಿ. ಸಮುದ್ರ ಮಟ್ಟದಿಂದ 636 ಮೀಟರ್ ಎತ್ತರದಲ್ಲಿರುವ ಭೀಮನವಾರೆ ಉತ್ತರಕನ್ನಡದ ಚಿರಾಪುಂಜಿ. ಅರಬ್ಬಿ ಸಮುದ್ರದ ಅಂಚಿನಲ್ಲಿ ಮುಳುಗುವ ಸೂರ್ಯನನ್ನು ಇಲ್ಲಿಂದ ಕಾಣುವುದು ನಿಮ್ಮ ಪ್ರವಾಸದ ಖುಷಿಯನ್ನು ಹೆಚ್ಚಿಸುವುದರಲ್ಲಿ ಸಂದೇಹವಿಲ್ಲ. ಇಲ್ಲಿನ ಸೂರ್ಯೋದಯವನ್ನೂ ಕಣ್ತುಂಬಿಕೊಳ್ಳಲೇಬೇಕು. ಶಿರಸಿಯಿಂದ ಕುಮಟಾ ದಾರಿಯಲ್ಲಿ ಸಿಗುವ ನಿಲ್ಕುಂದದಿಂದ 2 ಕೀ.ಮಿ.ಗೆ ಭೀಮನವಾರೆಯಿದೆ.



ಉಂಚಳ್ಳಿ ಜಲಪಾತದ ತಾಳಕ್ಕೆ ಕಾಮನಬಿಲ್ಲಿನ ಮೇಳ